ಶ್ರೀ ಶಂಕರಗೌಡ ಪೈ. ಪಾಟೀಲ್.—ಸರ್ಕಾರದವರು (ಬಿ) ಪ್ರಶ್ನೆಗೆ ''ಇಲ್ಲ'' ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಈ ಗುಲ್ಬರ್ಗ-ಬಿಜಾಪುರ ರಸ್ತೆ ಕೋಟ್ಯಂತರ ರೂಪಾಯಿಗಳ ಮಾಲನ್ನು ಸಾಗಿಸ ತಕ್ಕಂದ ರಸ್ತೆ ಹೌದೋ-ಅಲ್ಲವೋ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಬಗ್ಗೆ ರಿಪೋರ್ಟ್ ತರಿಸಿ ನೋಡಬೇಕು.

ಶ್ರೀ ಶಂಕರಗೌಡ ಪೈ. ಪಾಟೀಲ್.—ಆ ರಸ್ತೆಯ ಪಕ್ಕದಲ್ಲೇ ಒಂದು ದೊಡ್ಡ ಜಾತ್ರೆ ನಡೆಯುತ್ತದೆ. ಅದಕ್ಕೆ ಲಕ್ಷಾಂತರ ಜನರು ಬಂದು ಹೋಗುತ್ತಿದ್ದಾರೆಂಬ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ.

Expenditure incurred by P.W.D. on Channagiri-Davangere Road.

Q.—315. Sri K. RUDRAPPA (Channagiri).—

Will the Government be pleased to state:—

(*a*) the year in which the Channagiri, Devanahalli, Santebennur and Davangere road was taken over by the P.W.D.;

(*b*) the expenditure incurred by P.W.D. on this road after it was taken over by it;

(*c*) the places at which bridges and high-level causeways are required to be constructed on that road and the estimated expenditure thereon?

A.—Sri H. K. VEERANNA GOWDH (Minister for Public Works).—

(*a*) 1953.

(*b*) Rs. 70,000.

Estimated cost

(*c*) (i) Bridge across Hirehalla Rs. 1,01,000.

(ii) Bridge across Soppinahalla (Tubrehalla) Rs. 40,000.

ಶ್ರೀ ಕೆ. ರುದ್ರಪ್ಪ.—ಈಗ ಸರ್ಕಾರದವರು ಈ (ಬಿ) ಪ್ರಶ್ನೆಗೆ ಉತ್ತರವಾಗಿ 70,000 ರೂಪಾಯಿಗಳೆಂದು ತಿಳಿಸಿರುವುದು ಆ ದಾವಣಗೆರೆ—ಚನ್ನಗಿರಿ ರಸ್ತೆಗೆ ತಾನೇ?

ಅಧ್ಯಕ್ಷರು.—ಹೌದು.

ಶ್ರೀ ಕೆ. ರುದ್ರಪ್ಪ.—ಈಗ ನಾನು ಈ ಪ್ರಶ್ನೆಯನ್ನು ಏಕೆ ಕೇಳುತ್ತಿದ್ದೇನೆಂದರೆ ಸರ್ಕಾರದವರು ಈ ರಸ್ತೆಯಲ್ಲಿ ಮೂರು ದೊಡ್ಡ ಸೇತುವೆಗಳಿದ್ದರೂ ಕೇವಲ ಎರಡು ಸೇತುವೆಗಳ ಹೆಸರನ್ನು ಮತ್ತು ಅವುಗಳಿಗಾಗುವ ಖರ್ಚನ್ನು ಮಾತ್ರವೇ ತಿಳಿಸಿರುವುದರಿಂದ ಉಳಿದ ಇನ್ನೊಂದು ಸೇತುವೆಯ ವಿಚಾರವೇನಾಯಿತೆಂಬುದನ್ನು ಅವರು ತಿಳಿಸಿಲ್ಲವಾದ್ದರಿಂದ ಅವರು ಹೇಳಿರತಕ್ಕ ಖರ್ಚು ದಾವಣಗೆರೆ—ಚನ್ನಗಿರಿ ರಸ್ತೆಗೆ ಅಲ್ಲವೇ ಎಂದು ಕೇಳುತ್ತಿದ್ದೇನೆ?

ಅಧ್ಯಕ್ಷರು.—ತಾವು ಕೇಳಿರತಕ್ಕ ರಸ್ತೆಯ ವಿಚಾರವನ್ನೇ ಈಗ ಅವರೂ ತಿಳಿಸಿದ್ದಾರೆ.

ಶ್ರೀ ಕೆ. ರುದ್ರಪ್ಪ.—ಈಗ ದಾವಣಗೆರೆಗೆ ಚನ್ನಗಿರಿಯಿಂದ ಎರಡು ಬಸ್ಸುಗಳು ಹೋಗುತ್ತಿದ್ದವೆಂಬ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ?

*ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್.

ಶ್ರೀ ಕೆ. ರುದ್ರಪ್ಪ.—ಸಂತೇಬೆನ್ನೂರಿಂದ ದಾವಣಗೆರೆಗೆ ಹೋಗುತ್ತಿದ್ದವೆಂಬ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್.

ಶ್ರೀ ಕೆ. ರುದ್ರಪ್ಪ.—ಈ ಎರಡು ಸೇತುವೆಗಳಲ್ಲದೆ ಮುಂದೆ ಇನ್ನೊಂದು ದೊಡ್ಡ ಸೇತುವೆ ಇದೆ. ಅದೂ ಒಡೆದು ಹೋಗಿದೆ. ಅದರ ಅಂದಾಜು ಎಷ್ಟೆಂಬುದನ್ನು ತಿಳಿಸುವಿರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೆ ತಾವು ಒಂದು ಅಲಾಯಿದಾ ಪ್ರಶ್ನೆ ಕಳುಹಿಸಿ. ಅದಕ್ಕೆ ಉತ್ತರ ಒದಗಿಸಲಾಗುವುದು.

ಶ್ರೀ ಕೆ. ರುದ್ರಪ್ಪ.—ಮುಂದೆ ಇನ್ನೊಂದು ದೊಡ್ಡ ಹಳ್ಳವಿದೆ. ಅದು ಬಹಳ ಪ್ರಬಲವಾದದ್ದು. ಅದಕ್ಕೊಂದು ಅಂದಾಜನ್ನು ಬೇಗ ತಯಾರು ಮಾಡಿಸುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ತಾವು ಆ ಸಲಹೆಯನ್ನು ಕೊಡುತ್ತಿದ್ದೀರಿ. ಅದನ್ನು ಸರ್ಕಾರದವರು ಖಂಡಿತ ಪರಿಶೀಲನೆ ಮಾಡುತ್ತಾರೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಈಗ ಸರ್ಕಾರದವರು ಉತ್ತರದಲ್ಲಿ ತಿಳಿಸಿರುವ ಹೀರೇಹಳ್ಳ ಮತ್ತು ಸೊಪ್ಪಿನ ಹಳ್ಳ ಇವುಗಳಲ್ಲದೆ ಮತ್ತೆ ಬೇರೆ ಯಾವ ಹಳ್ಳಗಳಾದರೂ ಇವೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ ಹೇಳಿರುವು ದೆಷ್ಟೋ ಅಷ್ಟೆ.

ಶ್ರೀ ಎ. ಆರ್. ಬದರಿನಾರಾಯಣ.—ಚನ್ನಗಿರಿಯಿಂದ ದೇವರಹಳ್ಳಿ-ಸಂತೆಬೆನ್ನೂರು ಮಾರ್ಗವಾಗಿ ದಾವಣಗೆರೆಗೆ ಹೋಗತಕ್ಕ ರಸ್ತೆ ಎಂದು ವಿಶದವಾಗಿ ಕೇಳಿರುವಾಗ ಈ ರಸ್ತೆಯಲ್ಲಿ ಸರ್ಕಾರದವರಿಗೆ ತಿಳಿಸಿರುವ ಎರಡು ಸೇತುವೆಗಳಲ್ಲದೆ ಬೇರೆ ಯಾವುದೂ ಇಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್.

ಶ್ರೀ ಎ. ಆರ್. ಬದರಿನಾರಾಯಣ.—ಈ ಸರ್ಕಾರದವರು ಉತ್ತರದಲ್ಲಿ ತಿಳಿಸಿರುವ ಎರಡು ಸೇತುವೆಗಳಲ್ಲದೆ ಮತ್ತೆ ಯಾವುದರ ಅಂದಾಜೂ ಹೆಂಡಿಂಗ್ ಇಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ವಿವರಗಳೆಲ್ಲಾ ಇಲ್ಲ.

ಶ್ರೀ ಕೆ. ರುದ್ರಪ್ಪ.—ಚನ್ನಗಿರಿ, ದೇವನಹಳ್ಳಿ, ಸಂತೇಬೆನ್ನೂರು ಮತ್ತು ದಾವಣಗೆರೆ ರಸ್ತೆಗಳನ್ನು ಯಾವಾಗ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ತೆಗೆದು ಕೊಳ್ಳಲಾಯಿತು ಎಂದು ಕೇಳಿರುವುದಕ್ಕೆ 1953 ರಲ್ಲಿ ಎಂದು ಹೇಳಿದ್ದೀರಿ. ಅದೇ ರೀತಿ ಈ ರಸ್ತೆಗಳಲ್ಲಿ ಯಾವ ಯಾವ ಸ್ಥಳದಲ್ಲಿ ಸೇತುವೆ, ಹೈ ಲೆವಲ್ ಕಾಸ್‌ವೆಗಳನ್ನು ಕಟ್ಟಬೇಕು ಮತ್ತು ಅದಕ್ಕೆ ಆಗತಕ್ಕ ಪೊಬಲಗೇನು ಎಂದು ಕೇಳಿದ್ದೇನೆ. ಅದಕ್ಕೆ ಉತ್ತರವಾಗಿ ಎರಡು ಸ್ಥಳಗಳಲ್ಲಿ ಮಾತ್ರ ಸೇತುವೆ ಆಗಬೇಕೆಂದು ಹೇಳಿದ್ದೀರಿ. ಅದೇರೀತಿ ಇನ್ನು ಅನೇಕ ಕಡೆ ಸೇತುವೆ ಆಗಬೇಕು. ಅದಕ್ಕೆ ಅಂದಾಜು ತಯಾರು ಮಾಡಿಸುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೆ ಸಲಹೆ ಕೊಟ್ಟಿದ್ದೀರಿ. ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಕೆ. ರುದ್ರಪ್ಪ.—ಅವುಗಳನ್ನೆಲ್ಲಾ ಮಾಡಲಕ್ಕೆ ಈಗ ತಾವು ಮಾಡಿರತಕ್ಕ 1 ಲಕ್ಷ 40 ಸಾವಿರ ರೂಪಾಯಿಯ ಅಂದಾಜು ಸಾಕಾಗುತ್ತದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ರಸ್ತೆಯಲ್ಲಿ 2 ಹಳ್ಳಗಳಿವೆ. ಎರಡು ಹಳ್ಳಗಳಿಗೆ ಸೇತುವೆ ಕಟ್ಟಲು ಅಂದಾಜು ತಯಾರಾಗಿದೆಯೆಂದು ಹೇಳಿದ್ದೇವೆ. ಇನ್ನೂ ಹೆಚ್ಚು ಸೇತುವೆಗಳು ಆಗಬೇಕಾಗಿದ್ದರೆ. ಸಮಾಚಾರ ತರಿಸಬೇಕು. ಅಂದಾಜು ಮಾಡಿಎಂದು ಹೇಳಬೇಕು.

Retired D. E. Os. in Bangalore Division.

Q.—234. Sri M. LINGE GOWDA (Kanakapura).—

Will the Government be pleased to state:—

(*a*) The number of D. E. Os. (District Education Officers) in the Bangalore Division who have retired during 1956-57 up-to-date;

(*b*) the reasons for failure to appoint permanent officers so far;

(*c*) whether they intend to appoint seniormost headmasters to the said post, if the gradation list is not yet ready?

A.—Sri V. VENKATAPPA (Minister for Education).—

(*a*) Two.

(*b*) One of these posts has been filled up. Orders for filling up the other post also have been issued on 7th June 1957.

(*c*) Yes.

ಶ್ರೀ ಎಂ. ಲಿಂಗೇಗೌಡ.—ಮೈಸೂರು ಮತ್ತು ಮಂಡ್ಯಕ್ಕೆ ತಾವು ಆರ್ಡರ್ ಮಾಡಿರುವ ಪ್ರಕಾರ ಡಿ. ಇ. ಓ. ಅವರು ಇನ್ನೂ ಹೋಗಿಲ್ಲ ಎಂಬುದು ತಮ್ಮ ನಿಗಾಕ್ಕೆ ಬಂದಿದೆಯೇ?

ಶ್ರೀ ವಿ. ವೆಂಕಟಪ್ಪ.—ಇಲ್ಲ.

Loan by Central Government under Five-Year Plan with the Interest thereon.

Q.—356. Sri A. V. NARASIMHA REDDY (Bangalore South).—

Will the Government be pleased to state:—

(*a*) the amount of loan that the Government of India have given to the State Government during the First Five-Year Plan up to 31st March 1957 with the rate of interest;

(*b*) the works over which this loan amount has been spent;

(*c*) the names of works with respective amounts spent over them?

A.— Sri T. MARIAPPA (Minister for Finance).—

(*a*) The First Five-Year Plan commenced from 1951-52 and ended with 1955-56 and as such, figures for the First Five-Year Plan have been furnished up to the end of 1955-56.

The following are the loan assistance given by the Centre during the First Five-Year Plan:—

		Amount drawn Rs. in lakhs
1951-52	...	335·50
1952-53	...	221·13
1953-54	...	387·54
1954-55	...	805·64
1955-56	...	666·54
Total	...	2316·35

The rate of interest varies from 1½ per cent to 4½ per cent.

(*b*) The loans were utilised for Development Schemes coming under Irrigation, Electricity, Industries and Agriculture, etc.

(*c*) The Booklet "Progress of Expenditure during the First Five-Year Plan" showing the various Schemes together with the expenditure incurred against each scheme, is placed on the Table. (Placed in the Legislature Library No. 7—L. A. 57).

Sri M. C. NARASIMHAN.—Do these loans include loans for the housing of displaced persons and ex-service men?

ಶ್ರೀ ಟಿ. ಮರಿಯಪ್ಪ.—ನೋಟೀಸ್ ಕೊಟ್ಟರೆ ವಿವರವಾಗಿ ಹೇಳುತ್ತೇನೆ. ಇಲ್ಲಿರುವ ಸಮಾಚಾರದ ಪ್ರಕಾರ they were utilised for Development under Irrigation, Electricity, Industries and Agriculture ಬಾಕಿಯದೆಲ್ಲಾ small account ಗೆ utilise ಆಗಿದೆ.

Sri M. C. NARASIMHAN.—There is a loan of Rs. 7,97,500 towards the housing of displaced persons. What I want to know is: Who is to pay it? Is it the Government of Mysore that is paying or is it recovered from either